10 ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ರೈತರಿಂದ ಕಂತು ಸಂದಾಯ

೧೪೪೭ ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭೂ ಸುಧಾರಣೆ ಕಾನೂನಿನನ್ವಯ ಅಧಿಭೋಗದಾರರೆಂದು ತೀರ್ಮಾನವಾದ ೧೦ ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ರೈತರು ಸರ್ಕಾರಕ್ಕೆ ಕಟ್ಟಬೇಕಾದ ಭೂ ಮಾಲೀಕತ್ವದ ಹಣವನ್ನು ವಿನಾಯಿತಿ ಕೊಟ್ಟು ಒಟ್ಟು ಹಣ ಎಷ್ಟು ?

ಆ) ಈ ರಿಯಾಯಿತಿ ಆಜ್ಞೆ ಬರುವ ಮೊದಲು ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ಸಾಲ ಪಡೆದು ಸರ್ಕಾರಕ್ಕೆ ರೈತರಿಂದ ಸಂದಾಯವಾಗಿರುವ ಹಣ ಎಷ್ಟು ?

ಇ) ಭೂ ಸುಧಾರಣೆ ಕಾನೂನಿನನ್ವಯ ೧೦ ಎಕರೆಗಿಂತ ಕಡಿಮೆ ಮಾಲೀಕತ್ವ ಹೊಂದಿದ ರೈತರು ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲ ಪಡೆದು ಸರ್ಕಾರಕ್ಕೆ ತುಂಬಿದ ಹಣವನ್ನು ವಿನಾಯಿತಿ ಕೊಡುವುದು ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—(ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).

ಅ) ೪೨ ಕೋಟಿ ರೂ.ಗಳು

ಆ) ೧೦.೪೨ ಕೋಟಿ ರೂ.ಗಳು.

ಇ) ಇಲ್ಲ.

ಶ್ರೀ ಸಿ.ಎಂ. ಉದಾಸಿ —ಈಗ ರೈತರು ತೆಗೆದುಕೊಂಡ ಸಾಲದ ಹಣ ಕೊಡಬೇಕಾದ್ದು ೧೦.೪೨ ಕೋಟಿ ರೂಪಾಯಿಗಳು ಭೂ ಅಭಿವೃದ್ಧಿ ಬ್ಯಾಂಕಿನಿಂದ ಪಡೆದು ಸರ್ಕಾರಕ್ಕೆ ತುಂಬ ಬೇಕಾಗಿರುವುದು ೫–೬ ಕೋಟಿ ರೂಪಾಯಿಗಳು ಮಾತ್ರ ಇರಬಹುದು. ಇದನ್ನು ಸರ್ಕಾರದವರು ರದ್ದು ಮಾಡುತ್ತಾರೆಯೇ ಎನ್ನುವುದು ಒಂದು, ಎರಡನೆಯದಾಗಿ ಅವರಿಗೆ ಬಡ್ಡಿ ಮನ್ನಾ ಮಾಡಿ ಅದರ ಮೇಲೆ ತೀರಿಸಿಕೊಳ್ಳಲು ವ್ಯವಸ್ಥೆ ಮಾಡಲು ಪರಿಶೀಲನೆ ಮಾಡುತ್ತಾರೆಯೇ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಅನೇಕ ಸಲ ಇಲ್ಲಿ ಬಂದು ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಕಾನೂನು ತಿದ್ದುಪಡಿ ಮಸೂದೆ ಬಂದಾಗ ಕೂಡ ಹೇಳಿದ್ದೇನೆ. ಮುಂದೆ ಕೊಡತಕ್ಕಂಥ ಹಣವನ್ನು ಸೂಟಿ ಬಿಡುವ ವ್ಯವಸ್ಥೆಯಂಲ್ಲಿಲ್ಲ. ಹಣವನ್ನು ಕಟ್ಟಲಿ, ಅದನ್ನು ಮನ್ನಾ ಮಾಡಲಿಕ್ಕೆ ಸರ್ಕಾರದ ನಿಲುವನ್ನು ಅನಂತರ ತಿಳಿಸಲಾಗುತ್ತದೆ.

ಜಾತಿ/ಆದಾಯ ಪ್ರಮಾಣ ಪತ್ರಗಳನ್ನು ನೀಡುವುದಕ್ಕೆ ಸಂಬಂಧಿಸಿದ ತೊಂದರೆಗಳು

೫೬೩ (ಉ) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಹಶೀಲ್ದಾರ್ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಂದ ಜಾತಿ/ಆದಾಯದ ಪ್ರಮಾಣ ಪತ್ರಗಳನ್ನು ಪಡೆಯುವಲ್ಲಿ ಜನಗಳಿಗೆ ತೊಂದರೆಯಾಗುತ್ತಿರುವುದು ನಿಜವೆ;

ಆ) ಜಾತಿ/ಆದಾಯದ ಪ್ರಮಾಣ ಪತ್ರಗಳನ್ನು ನೀಡಲು ಯಾವ ವಿಧಾನವನ್ನು ಅಳವಡಿಸಲಾಗಿದೆ ;

ಇ) ಅಭ್ಯರ್ಥಿ ಅರ್ಜಿದಾರ ಪ್ರತಿ ಭಾರಿಯು ಜಾತಿ–ಆದಾಯದ ಪ್ರಮಾಣ ಪತ್ರಗಳನು ಪಡೆದುಕೊಳ್ಳಬೇಕಾದ ಅಗತ್ಯವಿದೆಯೇ:

ಈ) ಜಾತಿ/ಆದಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಲು ಖಾಯಂ ವ್ಯವಸ್ಥೆಯೇನಾದರೂ ಮಾಡಲಾಗಿದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಇಲ್ಲ, ಕಾರಣ, ಸರ್ಕಾರಿ ಉದ್ಯೋಗ ಮತ್ತು ಶೈಕ್ಷಣಿಕ ರಿಯಾಯಿತಿಗಳನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಪ್ರಮಾಣೀಕರಿಸಿದ ಘೋಷಣೆಯನ್ನು ಅರ್ಜಿಗಳಿಗೆ ಲಗತ್ತಿಸಿದರೆ ಸಾಕು.

ಆ) ಪ್ರಮಾಣೀಕರಿಸಿದ ಘೋಷಣೆಗಳನ್ನು ಪರಿಶೀಲಿಸಿ ಮತ್ತು ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪುಗಡಗಳಿಗೆ ಸೇರಿದವರೆಂದು ಖಾತರಿಪಡಿಸಿಕೊಂಡು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು ಕೇಂದ್ರ ಸರ್ಕಾರ ನಿಗಧಿಪಡಿಸಿರುವ ನಮೂನೆಯ ಫಾರಂನಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಕೊಡಲು ಅಧಿಕಾರ ಹೊಂದಿರುತ್ತಾರೆ.

ಇತರ ಹಿಂದುಳಿದ ಜಾತಿಗಳಿಗೆ ಸೇರಿದ ಅಭ್ಯರ್ಥಿಗಳು ಅರ್ಜಿಗಳ ಜೊತೆಗೆ ಸಲ್ಲಿಸಿದ ಪ್ರಮಾಣೀಕರಿಸಿದ ಘೋಷಣೆಗಳನ್ನು ಸಂಬಂಧಪಟ್ಟ ತಹಶೀಲ್ದಾರ್‌ರವರುಗಳಿಂದ ಅಥವಾ ಮುನಿಸಿಪಾಲಿಟಿಗಳ ಅಧಿಕಾರಿಗಳಿಂದ ತನಿಖೆ ಮಾಡಿಸಲಾಗುವುದು

ಇ) ಪ್ರತಿಸಾರಿಯೂ ಜಾತಿ/ಆದಾಯ ಪ್ರಮಾಣ ಪತ್ರಗಳನ್ನು ಪಡೆಯುವ ಅಗತ್ಯವಿಲ್ಲ ಕಾರಣ, ಸರ್ಕಾರದ ಆದೇಶ ಕ್ರಮಾಂಕ ಡಿಪಿಎಆರ್ ೩೩ ಎಸ್‌ಬಿಸಿ ೮೧ ದಿನಾಂಕ ೧೯-೮೧ರನ್ವಯ ಅಭ್ಯರ್ಥಿಗಳು ಉದ್ಯೋಗಕ್ಕೆ ಸಲ್ಲಿಸುವ ಅರ್ಜಿಗಳ ಜೊತೆಗೆ ಪ್ರಮಾಣೀಕರಿಸಿದ ಘೋಷಣೆಗಳ ಪತ್ರಗಳನ್ನು ಲಗತ್ತಿಸಿದರೆ ಸಾಕು. ಆಯ್ಕೆಯಾದ ಅಭ್ಯರ್ಥಿಗಳ ಪ್ರಮಾಣೀಕರಿಸಿದ ಘೋಷಣೆಗಳನ್ನು ನೇಮಕಾತಿ ಆದೇಶ ಹೊರಡಿಸುವ ಮೊದಲು ನೇಮಕಾತಿ ಮಾಡುವ ಅಧಿಕಾರಿಗಳು ಪರಿಶೀಲನೆ ಮಾಡಿಸಬಹುದಾಗಿದೆ.

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಖಾಯಂ ಆಧಾರದ ಮೇಲೆ ಜಾತಿ ಪ್ರಮಾಣ ಪತ್ರಗಳನ್ನು ಕೊಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ಇತರ ಹಿಂದುಳಿದವರೆಂದು ಪರಿಗಣಿಸಿರುವ 'ಬಿ' ಯಿಂದ 'ಇ' ಗುಂಪುಗಳಿಗೆ ಸೇರಿದ ಜಾತಿಗಳವರಿಗೆ ಆದಾಯ ಮಿತಿ ಇರುವುದರಿಂದ ಖಾಯಂ ಆಗಿ ಆದಾಯ ಪತ್ರಗಳನ್ನು ಕೊಡುವುದು ಸಾಧ್ಯವಾಗದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸನ್ಮಾನ್ಯ ಅಧ್ಯಕ್ಷರೆ, ಪ್ರತಿ ತಾಲ್ಲೂಕು ತಹಶೀಲ್ದಾರರು ಸರ್ಟಿಫಿಕೇಟ್ ಕೊಡುವುದಕ್ಕೆ ಅಧಿಕಾರ ಇರುತ್ತದೆ ಹೋದ ವರ್ಷ ಎಂಟ್ರೆನ್ಸ್ ಅಂದರೆ ವಿದ್ಯಾರ್ಥಿಗಳು ಪ್ರವೇಶ ಪಡೆಯುವಾಗ ವಿಶೇಷವಾದ ಗೊಂದಲ ನಡೆಯಿತು. ಅಭ್ಯರ್ಥಿಗಳು ಪ್ರವೇಶವನ್ನು ಪಡೆದು ವಿಶೇಷ ಸೌಲಭ್ಯವನ್ನು ಒಂದು ಸಲ ತೆಗೆದುಕೊಂಡರೆ, ವಿದ್ಯಾಭ್ಯಾಸ ಮುಗಿಯುವವರೆಗೂ ಅದೇ ಸರ್ಟಿಫಿಕೇಟ್ ನಡೆಯುತ್ತದೆಯೇ ಎನ್ನುವುದು ಒಂದು. ಎರಡನೆಯದಾಗಿ, ಸಾಕಷ್ಟು ಬೋಗಸ್ ಸರ್ಟಿಫಿಕೇಟ್ ಬಂದಿವೆ ಎಂದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ? ಬೆಂಗಳೂರಿನಲ್ಲಿ ದಕ್ಷಿಣ ಮತ್ತು ಉತ್ತರ ತಾಲ್ಲೂಕಿನಲ್ಲಿ ಐದುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸರ್ಟಿಫಿಕೇಟ್‌ಗೋಸ್ಕರವಾಗಿ ಬರುತ್ತಿದ್ದಾರೆಂದು ಸರ್ಕಾರ ಸ್ಪೆಷಲ್ ತಹಶೀಲ್ದಾರರನ್ನು ಅಪಾಯಿಂಟ್ ಮಾಡಿದ್ದಾರೆ. ಆದರೂ ಕಡಿಮೆಯಾಗಿಲ್ಲ. ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಯವರು ಈಗ ಸಭೆಯ ಗಮನಕ್ಕೆ ತಂದಿದ್ದಾರೆ. ಕ್ಯಾಸ್ಟ್ ಸರ್ಟಿಫಿಕೇಟ್, ಇನ್‌ಕಮ್ ಸರ್ಟಿಫಿಕೇಟ್ ಕೊಡುವ ವಿಷಯದಲ್ಲಿ ಬಹಳ ಗೊಂದಲ ತಹಶೀಲ್ದಾರರ ಆಫೀಸಿನಲ್ಲಿ ಉಂಟಾಗುತ್ತಿದೆ. ಕ್ಯೂನಲ್ಲಿ ನಿಂತು ಶಾಲಾ ಕಾಲೇಜಿಗೆ ಸೇರ ತಕ್ಕಂಥ ವಿದ್ಯಾರ್ಥಿಗಳು ಸರ್ಟಿಫಿಕೇಟನ್ನು ಪಡೆಯುತ್ತಿದ್ದಾರೆ ಎನ್ನುತಕ್ಕಂಥ ವಿಚಾರ ಸರ್ಕಾರದ ಗಮನಕ್ಕೆ ಬಂದು ಈಗಾಗಲೇ ಅಧಿಕಾರಿಗಳೊಡನೆ ಚರ್ಚೆ ಮಾಡಿ ಈ ಬಗ್ಗೆ ಒಂದು ವ್ಯವಸ್ಥೆ ಮಾಡಲು ಕ್ರಮ ತೆಗೆದುಕೊಂಡಿದೆ. ಇಂಥ ಒಂದು ವ್ಯವಸ್ಥೆಯನ್ನು ಮಾಡಿ, ಟೂ ಕಾಪಿಗೆ ಗೆಜೆಟೆಡ್ ಆಫೀಸರ್‌ರವರ ಸೈನ್ ಹಾಕಿಸಿ ಅರ್ಜಿಗಳ ಜೊತೆಯಲ್ಲಿ ಇರಬೇಕೆಂದು ತಿಳಿಸಲಾಗಿದೆ. ಅದರ ಆಧಾರದ ಮೇಲೆ ಕ್ಯಾಸ್ಟ್ ಸರ್ಟಿಫಿಕೇಟ್ ಪಡೆದವರಿಗೆ ಶಾಶ್ವತವಾದ ಪರಿಹಾರ ಕೊಡತಕ್ಕಂಥ ವ್ಯವಸ್ಥೆಯನ್ನು ಇನ್ನು ಒಂದು ತಿಂಗಳಲ್ಲಿಯೇ ಮಾಡಲಾಗುತ್ತದೆ.

ಎರಡನೆಯದಾಗಿ, ಬೋಗಸ್ ಜಾತಿ ಸರ್ಟಿಫಿಕೇಟ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಅನೇಕ ಪ್ರಕರಣಗಳನ್ನು ಪತ್ತೆ ಹಚ್ಚಿ ತಪ್ಪಿತಸ್ಥರಾದವರನ್ನು ವಿಚಾರಣೆಗೆ ಗುರಿಪಡಿಸಿದ್ದೇವೆ. ಸುಮಾರು ೮೩ಕ್ಕಿಳಿ

ಇಂಥ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಮತ್ತೆ ಪತ್ತೆ ಹಚ್ಚಿದ ಎಲ್ಲಾ ಪ್ರಕರಣಗಳ ಬಗ್ಗೆಯೂ ವಿಚಾರಣೆಗೆ ಗುರಿಪಡಿಸಿ ಸೂಕ್ತ ಕಾರ್ಯಕ್ರಮವನ್ನು ಇಲಾಖೆ ತೆಗೆದುಕೊಂಡಿದೆ ಎಂದು ತಿಳಿಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದುಕೊಂಡು ಕೆಲಸಕ್ಕೆ ಸೇರಿರತಕ್ಕಂಥ ಸಾವಿರಾರು ಜನರು ಇದ್ದಾರೆ. ಅವರನ್ನು ಪತ್ತೆ ಹಚ್ಚಿ ಮನೆಗೆ ಕಳುಹಿಸಿದರೆ ಅವರ ಗತಿ ಏನು? ಬೋಗಸ್ ಸರ್ಟಿಫಿಕೇಟ್ ತೆಗೆದುಕೊಂಡು ಕೆಲಸಕ್ಕೆ ಸೇರಿರತಕ್ಕಂಥ ಸುಮಾರು ೮೫೦ ಜನರು ಇದ್ದಾರೆ. ಆದ್ದರಿಂದ ಶಾಶ್ವತವಾಗಿ ಪಾಸ್‌ಬುಕ್ ಕೊಡತಕ್ಕಂಥ ವ್ಯವಸ್ಥೆ ಏನಾದರೂ ಸರ್ಕಾರದವರು ಮಾಡುತ್ತಾರೆಯೇ?

ಶ್ರೀ ಬಿ. ಬಸವಣ್ಣಪ್ಪ.—ಶಾಶ್ವತವಾಗಿ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ಒಂದು ಸಾರಿ ಕ್ಯಾಸ್ಟ್ ಸರ್ಟಿಫಿಕೇಟ್ ಇಷ್ಯೂ ಮಾಡಿದ ಮೇಲೆ ಮುಗಿಯಿತು. ಮತ್ತೆ ಬೇಕಾದರೆ ಅದನ್ನು ಟೂ ಕಾಪಿ ಮಾಡಿಸಿಕೊಳ್ಳಬೇಕು. ಆದ್ದರಿಂದ ಈ ಗೊಂದಲವನ್ನು ಬಗೆಹರಿಸುತ್ತೇವೆ.

ಸಂಡೂರಿನಲ್ಲಿ ಪದವಿ ಪೂರ್ವ ವಿದ್ಯಾರ್ಥಿ ನಿಲಯ

೧೪೬೮. (೫) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರಿನಲ್ಲಿ ಸರ್ಕಾರಿ ವಿದ್ಯಾರ್ಥಿ ನಿಲಯ ಸೌಲಭ್ಯವಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಶೈಕ್ಷಣಿಕ ಸಾಲಿನಲ್ಲಿ ಸಂಡೂರಿನಲ್ಲಿ ಪದವಿ ಪೂರ್ವ ವಿದ್ಯಾರ್ಥಿನಿಲಯ (ಹಿಂದುಳಿದ ವರ್ಗ ಪಂಗಡಗಳು) ಪ್ರಾರಂಭಿಸಲಾಗುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು. ಭೂಪತಿ.—ಈ ಪ್ರಶ್ನೆಯನ್ನು ನಾನು ಈ ಸದನದಲ್ಲಿ ಒನೇ ಸಾರಿ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಮೊದಲನೇ ಸಾರಿ ಸರ್ಕಾರದ ಗಮನಕ್ಕೆ ಬಂದಿದೆ. ೨ನೇ ಸಾರಿ ದೊಡ್ಡ ಭಾಷಣ ಮಾಡಿ ತಾಲ್ಲೂಕಿಗೆ ಒಂದು ಹಾಸ್ಟೆಲ್ ಕೊಡುತ್ತೇವೆ, ಅದಕ್ಕೆ ಜಿಲ್ಲಾಧಿಕಾರಿಗಳಿಂದ ಸೂಚನೆ ಬಂದರೆ ಪಂಜೂರಾತಿ ಬಗ್ಗೆ ಪರಿಶೀಲಿಸುತ್ತೇವೆ. ೩ನೇ ಸಾರಿ ಸರ್ಕಾರದ ಗಮನಕ್ಕೆ ಬಂದಿಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ೪ನೇ ಸಾರಿ ಏನಾಗಬಹುದೆಂಬುದನ್ನು ಊಹಿಸಬೇಕಂ. ಇದರ ತೀವ್ರತೆಯನ್ನು ಸಚಿವರು ಅರ್ಥ ಮಾಡಿಕೊಳ್ಳಬೇಕು. ನಾನು ಕೂಡ ಹಾಸ್ಟೆಲಿನಲ್ಲಿ ಓದಿದವನೆ. ಸಂಡೂರು ಕಾಲೇಜು ಹುಡುಗರಿಗೆ ಖಾಸಗಿ ಹಾಸ್ಟೆಲು ಇತ್ತು. ಅಲ್ಲಿ ತಿಂಗಳಿಗೆ ೨೦–೩೦ ರೂಪಾಯಿ ಮಾತ್ರ ತೆಗೆದುಕೊಳ್ಳುತ್ತಿದ್ದರಂ ಅಲ್ಲಿ ಜೂನಿಯರ್ ಕಾಲೇಜು ಫಸ್ಟ್ ಗ್ರೇಡ್ ಕಾಲೇಜು ಇದೆ. ನಂದಿಹಳ್ಳಿಯಲ್ಲಿ ಪಿ. ಜೆ. ಸೆಂಟರ್ ಇದೆ. ಆದರೆ ಅಲ್ಲಿ ಎಲ್ಲಿಯೂ ಖಾಸಗಿ ಹಾಸ್ಟೆಲು ಇಲ್ಲದೆ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಪರಿಶೀಲಿಸಿಕೊಂಡು ೫೦ ಸೀಟು ಇರತಕ್ಕ ಬಿ.ಸಿ.ಎಂ. ಹಾಸ್ಟೆಲನ್ನು ಮಂಜೂರಾ ಮಾಡಬೇಕೆಂದು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ತಮ್ಮ ಪ್ರಶ್ನೆಯಲ್ಲಿ ಸಂಡೂರಿನಲ್ಲಿ ವಿದ್ಯಾರ್ಥಿ ನಿಲಯದ ಸೌಲಭ್ಯ ಇಲ್ಲವೆಂದು ಹೇಳಿದ್ದೀರಿ. ಅಲ್ಲಿ ಒಂದು ಹಾಸ್ಟೆಲು ಇದೆ. ಆದರಲ್ಲಿ ೫೦ ವಿದ್ಯಾರ್ಥಿಗಳಿಗೆ ಅನುಕೂಲವಾಗತಕ್ಕ ಅವಕಾಶ ಇದೆ. ಅದಕ್ಕೋಸ್ಕರ ಮೊದಲ ಪ್ರಶ್ನೆಗೆ ಇಲ್ಲ ಎಂದು ಹೇಳಿದೆ. ೧೯೮೬–೮೭ರಲ್ಲಿ ಎಸ್. ಸಿ./ಎಸ್. ಟಿ. ಮಂತ್ರು ಬಿ. ಸಿ. ಎಂ. ಹಾಸ್ಟೆಲುಗಳನ್ನು ತೆರೆಯಲು ಬಡ್ಜೆಟ್ ಪ್ರಾವಿಷನ್ ಇರಲಿಲ್ಲ. ಈ ವರ್ಷ ಬೇಡಿಕೆ ಪಾಸ್ ಮಾಡುವಾಗ ವಿಚಾರ ಮಾಡೋಣ.

ಶ್ರೀ ಯು. ಭೂಪತಿ.—ನಾನು ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟೆಲು ಒದಗಿಸಿಕೊಡಬೇಕೆಂದು ಕೇಳಿದ್ದೇನೆ. ಪ್ರಶ್ನೆಯನ್ನು ಇಲಾಖೆಯಲ್ಲಿ ಏಕೆ ಹೀಗೆ ಮಾಡುತ್ತಾರೋ ಗೊತ್ತಿಲ್ಲ. ಅನೇಕ